ಟಿ.ಎಂ. ಮಾನಪ್ಪ, ಶಿವಮೊಗ್ಗ
ಕತ್ತು ನೋವಿಗೆ ಬೆಲ್ಟ್ ಯಾಕೆ?



ಬೆಲ್ಟ್ ಹಾಕಿದ ನಾಯಿ ಎಂದೂ ಕತ್ತುನೋವು ಅನ್ನದಿರುವುದೇ ಸ್ಫೂರ್ತಿಯಂತೆ.

ಸುನಿತಾ ಬಾಣಿ, ಕೊಮ್ಮಘಟ್ಟ
ಭಕ್ತಿಗೂ, ವಿರಕ್ತಿಗೂ ಸಂಬಂಧವೇನು?
ಪ್ರೀತಿಯೇ; ಪ್ರೀತಿಯ ತಾರಕವೇ ಭಕ್ತಿ; ಪ್ರೀತಿಯ ಮಂದ್ರವೇ ವಿರಕ್ತಿ.

ವಿ.ಹಮೀದ್, ವಿಟ್ಲ
ಹೀಲ್ಡ್ ಚಪ್ಪಲಿ ಧರಿಸುವ ಹುಡುಗಿಯರು ಕಡಿಮೆಯಾಗಲು ಕಾರಣವೇನು?
ಸೊಂಟ ಬಳುಕಿಗಿಂತ ಉಳುಕೇ ಹೆಚ್ಚಾದ್ದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಪಾಪ ಮತ್ತು ಪುಣ್ಯ; ಇವುಗಳ ಮಧ್ಯೆ ಏನು ಸಾರ್?
ಪಶುತ್ವದಿಂದ ಮನುಷ್ಯತ್ವದತ್ತ ವಿಕಸನ.

ಎನ್.ಕೆ. ಹೆಬ್ಬಾರ, ಕೋಣೆ
ಪ್ರೇಮ ಕುರುಡು; ಪ್ರೇಮಿಗಳು...?



ಬ್ಯಾಲೆನ್ಸ್ ಇಲ್ಲದವರು; ಅದಕ್ಕೇ ಅವರು ಒಬ್ಬರ ಮೇಲೊಬ್ಬರು ವಾಲಿಕೊಂಡು ನಡೆಯುವುದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮಣ್ಣಿಗೆ ಸಂಸ್ಕಾರ ಕೊಟ್ಟರೆ ಮಡಿಕೆಯಾಗುತ್ತದೆ. ಮನುಷ್ಯನಿಗೆ ಸಂಸ್ಕಾರ ಕೊಟ್ಟರೆ?
ಯಾವುದು? 16ನೆಯದಾದರೆ ಅದೇ ಮಡಿಕೆಯಲ್ಲಿ ಸೇರಿಕೊಳ್ಳುತ್ತಾನೆ.

ಪಿ. ಜಯವಂತ ಪೈ, ಕುಂದಾಪುರ
ಹಾವೇರಿಯ ಕಾಲೇಜೊಂದರಲ್ಲಿ ವಿದ್ಯಾರ್ಥಿಗಳ ತಲೆಗೆ ರಟ್ಟಿನ ಪೆಟ್ಟಿಗೆ ಹಾಕಿ ಪರೀಕ್ಷೆ ಬರೆಸಿದರಂತೆ?
'Write in the box' ಎಂಬ ಆದೇಶವನ್ನು ಕಾಲೇಜಿನವರು 'ರಟ್ಟಿನಲ್ಲಿ' ಎಂದು ಅರ್ಥ ಮಾಡಿಕೊಂಡರಂತೆ.

ರತ್ನಾ ರಾಜ್‌ಕುಮಾರ್, ಹಾಸನ
ನಾವು ಪುಣ್ಯಕೋಟಿ ತರಹದವರು ಅಂದಕೂಡಲೆ ಇಡಿಯವರ ಆತಿಥ್ಯವನ್ನು ಅನುಭವಿಸಬೇಕಾಯಿತಲ್ಲ...?
ಇಡಿಗೆ 'ಪುಣ್ಯ' ಕೇಳಿಸದೆ, 'ಕೋಟಿ ವರಹದವರು' ಎಂದು ಕೇಳಿಸಿತಂತೆ.

ಎಂ.ಎಸ್. ಗುರುರಾಜಾಚಾರು, ಹುಬ್ಬಳ್ಳಿ
ಗಂಗಾನದಿಯಲ್ಲಿ ಸ್ನಾನ ಮಾಡುವವರೆಲ್ಲಾ ಪಾಪಿಗಳಾ ಸಾರ್?
ಸೋಪು, ಎಣ್ಣೆಗಳನ್ನು ಬಳಸಿ ಜಲಮಾಲಿನ್ಯ ಮಾಡುವವರಂತೂ ಪರಿಸರಪಾಪಿಗಳು.

ಮುಕುಂದ ಹೆರಕಲ್ಲ, ಬೆಂಗಳೂರು
ದೂರದರ್ಶನದ ಧಾರಾವಾಹಿಗಳಲ್ಲಿ ಮಹಾಲಯ ಪಕ್ಷದ ಆಚರಣೆಯನ್ನು ಏಕೆ ತೋರಿಸುವುದಿಲ್ಲ?
ಹುಷ್! ಕೇಳಿಸಿಕೊಂಡರೆ ಹತ್ತು ತಲೆಮಾರಿಗೆ ತರ್ಪಣ ಬಿಡುವುದನ್ನು ತೋರುತ್ತಾ ವೀಕ್ಷಕರ ತಿಥಿ ಮಾಡಿಯಾರು.

ಮುರಲೀಧರ ಕುಲಕರ್ಣಿ, ಬೀದರ್
ಮೂಲರಾಮ ಎಂಬ ಪದವನ್ನು ಕೆಲವರು ಬಳಸುತ್ತಾರೆ. ಹಾಗಾದರೆ ಇನ್ನೊಬ್ಬ ಡೂಪ್ಲಿಕೇಟ್ ರಾಮ ಇರಬಹುದೆ?
ಮೂಲ ಎಂದರೆ ಕಂಟಕ ಎಂದರ್ಥ. ಅಧರ್ಮಕ್ಕೆ ಕಂಟಕನಾದವನೇ ಮೂಲರಾಮ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
'ಉಮಾಶಂಕರ', 'ಲಕ್ಷ್ಮೀನಾರಾಯಣ'ರಂತೆ 'ರುಕ್ಮಿಣಿಕೃಷ್ಣ' ಇರಬೇಕಿತ್ತು. ಆದರೆ 'ರಾಧಾಕೃಷ್ಣ' ಇರುವುದರ ಮರ್ಮವೇನು?
ಜಯಾ ಅಮಿತಾಭ್ ಎನ್ನುವುದಕ್ಕಿಂತ ರೇಖಾ ಅಮಿತಾಭೇ ಜನರಿಗೆ ಪ್ರಿಯ. ಇದೂ ಹಾಗೆಯೇ.

ರಮೇಶ್, ಹನುಮನಾಳು
ದೇವರ ಫೋಟೊವನ್ನು ವಾಹನದ ಮೇಲೆ ಅಂಟಿಸಿದರೂ ಅಪಘಾತ ಆಗುವುದು ಏಕೆ?
ಫೋಟೊಗೆ ನಮಿಸಲು ಎದುರಿನ ವೆಹಿಕಲ್‌ನ ಡ್ರೈವರ್ ಸ್ಟೇರಿಂಗಿನಿಂದ ಕೈ ತೆಗೆಯುವುದೇ ಕಾರಣವಂತೆ.

## ಬಹುಮಾನಿತ ಪ್ರಶ್ನೆ

ಗಡಿಯಾರದ ಸುಬ್ರಹ್ಮಣ್ಯ, ಬೆಂಗಳೂರು
ಗಿರಿಜಾಮೀಸೆ ಎನ್ನುತ್ತಾರಲ್ಲಾ, ಗಿರಿಜೆಗೂ, ಮೀಸೆಗೂ ಎಲ್ಲಿಯ ಸಂಬಂಧ?
ದಾದಾಗಿರಿಯ ಮುಖದಲ್ಲಿ ಹುಟ್ಟಿದ 'ದಾದಾಗಿರಿಜಾ' ಮೀಸೆ ಪುಟ್ಟದಾಗಿ 'ಗಿರಿಜಾಮೀಸೆ' ಆಯಿತು.

ಯುವರಾಜ ಹೆಚ್, ಬಳ್ಳಾರಿ
ನಿಮ್ಮ ವಾರಪತ್ರಿಕೆಗೆ 'ಸುಧಾ' ಎಂದು ಹೆಸರಿಡಲು ಕಾರಣವೇನು?
ಸು ಸುವಿಚಾರದ; ಧಾ ಧಾರೆ ಹರಿಸುವುದರಿಂದ.

ಫಾಲನೇತ್ರ ಸಜ್ಜನ, ಶಿರಸಿ
ಆತ್ಮಕ್ಕೆ ನೆರಳಿದೆಯೇ?
ಕಲ್ಪನೆಗಳಿಗೆ ನೆರಳಿರುವುದಿಲ್ಲ.

ಎಸ್.ಎ. ಮೋಹನರಾಜು, ಶಂಕರಘಟ್ಟ
ಕನ್ನಡವೇ ಸತ್ಯ; ಕನ್ನಡವೇ ನಿತ್ಯ. ಕನ್ನಡ ಜನ?



ಹವ್ಯಕ ಕನ್ನಡಿಗರು 'ಎಲ್ಲಿ ನಿತ್ಯಾ', 'ಎಲ್ಲಿ ಸತ್ಯಾ' ಎನ್ನುವುದಕ್ಕೆ ಪೂರಕವಾಗಿದ್ದಾರೆ.

ಎಚ್.ವಿ. ಶ್ರೀಧರ್, ಬೆಂಗಳೂರು
ಪೂರ್ಣ ಅಚ್ಚಕನ್ನಡದಲ್ಲೇ ವ್ಯವಹರಿಸುತ್ತಿದ್ದ ಬಸ್ ಕಂಡಕ್ಟರ್‌ಗಳು ಈಗ ಒಬ್ಬರೂ ಕಾಣುವುದಿಲ್ಲವಲ್ಲಾ...?
ವಾಹಿನಿಗಳ ತುಚ್ಛಕನ್ನಡ, ಕೊಚ್ಚೆಕನ್ನಡ, ಹುಚ್ಚುಕನ್ನಡಗಳ ಪ್ರವಾಹದಲ್ಲಿ ಅಚ್ಚಕನ್ನಡ ನುಡಿವವರು ಕೊಚ್ಚಿಹೋದರಂತೆ.

ರೈಲ್ವೇ ತ್ಯಾಗಪ್ಪ, ಬಳ್ಳಾರಿ
ಜನರಿಂದ ಆರಿಸಿ ಬಂದ ಶಾಸಕರು ಅತೃಪ್ತರು, ಅನರ್ಹರು ಆಗಲು ಕಾರಣ?
ಅದು ನಂತರ ಆದುದಲ್ಲ. ನಾವು ಹೆಚ್ಚಾಗಿ ಆರಿಸುತ್ತಿರುವುದೇ ಅನರ್ಹರು, ಅತೃಪ್ತರು, ಅಯೋಗ್ಯರನ್ನು.

■ ರಾಮ್